ಏನು ಆಗಿಲ್ಲ. ಈ ಸಂದರ್ಭದಲ್ಲಿ ಮಾನ್ಯ ಶಾಸಕರಿಗೆ ಹೇಳುವುದಕ್ಕೆ ಬಯಸುವುದೇನೆಂದರೆ, ನಮ್ಮ ಇಡೀ ಇಲಾಖೆಯಲ್ಲಿ ಆಹಾರ ಶಿರಸ್ತೇದಾರರು, ಫುಡ್ ಇನ್ಸ್‌ಪೆಕ್ಟರ್ಸ್ ಮತ್ತು ಕ್ಲರ್ಕ್‌ಗಳೆಲ್ಲದನ್ನೂ ಸೇರಿ ಒಟ್ಟು 84 ಜನರಿಗೆ ವರ್ಗಾವಣೆ ಮಾಡಿದ್ದೇವೆ. ಮತ್ತೆ ಸರ್ವೇಸಾಮಾನ್ಯವಾಗಿ ಸರ್ಕಾರಗಳು ಬದಲಾವಣೆಯಾದಂಥ ಸಂದರ್ಭದಲ್ಲಿ ಶಾಸಕರು, ಮಂತ್ರಿಗಳು ಮತ್ತು ಸಂಸದರು ಸ್ವಲ್ಪ ಮಟ್ಟಿಗೆ ವರ್ಗಾವಣೆಗೆ ಶಿಫಾರಸ್ಸುಗಳನ್ನು ಮಾಡುತ್ತಾರೆ. ಯಾರ್ಯಾರು ತಕರಾರು ಮಾಡುತ್ತಾರೆ ಮತ್ತೆ ಯಾರ್ಯಾರ ಮೇಲೆ ದೂರುಗಳು ಬರುತ್ತವೆಂದೋ ಅಂಥ ಸಂದರ್ಭದಲ್ಲಿ ನಾವು ವರ್ಗಾವಣೆಯನ್ನು ಮಾಡಬೇಕಾಗುತ್ತದೆ. ವರ್ಗಾವಣೆಯನ್ನು ಆಡಳಿತ ದೃಷ್ಟಿಯಿಂದ ಮತ್ತು ದೂರುಗಳು ಬಂದಂಥ ದೃಷ್ಟಿಯಿಂದ ಕೂಡ ಮಾಡಬೇಕಾಗುತ್ತದೆ. ಹಾಗೆಯೇ ಮಾನ್ಯ ಶಾಸಕರುಗಳ ಶಿಫಾರಸುಗಳನ್ನು ಕೂಡ ಪರಿಗಣಿಸಬೇಕಾಗುತ್ತದೆ. ಈ ಎಲ್ಲ ಕಾರಣಕ್ಕಾಗಿ ವರ್ಗಾವಣೆಗಳು ಆಗಿವೆ. ಇದರಿಂದ ಸರ್ಕಾರಕ್ಕೆ ಆಗಿರತಕ್ಕಂಥ ಹೊರೆ ಎಷ್ಟೆಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಸದ್ಯಕ್ಕೆ ಈ ಬಗ್ಗೆ ಸಂಬಂಧಪಟ್ಟಂಥ ಮಾಹಿತಿ ಇಲ್ಲ. ತರಿಸಿ ಕೊಡುತ್ತೇನೆ.

**ಶ್ರೀ ಸಿ.ಎಸ್. ನಾಡಗೌಡ** : ಆಯಿತು.

**ಅಧ್ಯಕ್ಷರು** : ಮಾನ್ಯ ಶಂಕರಲಿಂಗೇಗೌಡರ ಪ್ರಶ್ನೆಗೆ ಮಂಗಳವಾರ ಮಾನ್ಯ ಮುಖ್ಯಮಂತ್ರಿಯವರು ಉತ್ತರ ಕೊಡುತ್ತಾರೆ. ಆ ದಿವಸ ತೆಗೆದುಕೊಳ್ಳುತ್ತೇನೆ.

**ಹಾಸನ ಜಿಲ್ಲೆಯಲ್ಲಿ ಟಾಸ್ಕ್‌ಫೋರ್ಸ್ ಕಾಮಗಾರಿಗಳ ಅನುಷ್ಠಾನ.**

194 (832) ಶ್ರೀ ಬಿ. ಶಿವರಾಮು (ಗಂಡಸಿ) : ಮಾನ್ಯ ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಹಾಸನ ಜಿಲ್ಲೆಯಲ್ಲಿ ಟಾಸ್ಕ್‌ಫೋರ್ಸ್‌ನಡಿ ಕೈಗೊಂಡಿರುವ ಕಾಮಗಾರಿಗಳನ್ನು 1999ರ ಪಾರದರ್ಶಕತೆ ಕಾಯ್ದೆಯನ್ವಯ ಅನುಷ್ಠಾನಗೊಳಿಸಿರುತ್ತದೆಯೇ;

ಆ) ಹಾಗಿದ್ದಲ್ಲಿ, ಒಟ್ಟು ಕೈಗೊಂಡಿರುವ ಕಾಮಗಾರಿಗಳು ಯಾವುವು;

ಇ) 1999ರ ಪಾರದರ್ಶಕತೆ ಕಾಯ್ದೆಯನ್ವಯ ಸದರಿ ಕಾಮಗಾರಿಗಳಿಗೆ ಅನುಸರಿಸಿರುವ ಮಾರ್ಗಗಳೇನು; (ವಿಭಾಗವಾರು ಮಾಹಿತಿ ಒದಗಿಸುವುದು)

ಈ) ಈ ಕಾಮಗಾರಿಗಳ ಅನುಷ್ಠಾನಕ್ಕೆ ಪಾರದರ್ಶಕತೆ ಕಾಯ್ದೆಯಿಂದ ಯಾವುದಾದರೂ ಸಂದರ್ಭದಲ್ಲಿ ವಿನಾಯಿತಿಯನ್ನೇನಾದರು ಸರ್ಕಾರ ಕೊಟ್ಟಿದೆಯೇ; (ಕೊಟ್ಟಿದ್ದಲ್ಲಿ ಮಾಹಿತಿ ಒದಗಿಸುವುದು);

ಉ) ಸರ್ಕಾರದ ಪಾರದರ್ಶಕ ನೀತಿಯನ್ವಯ ಅನುಮೋದಿತ ಸರಬರಾಜು ಸಂಸ್ಥೆಗಳಿಂದಲೇ ಸಾಮಗ್ರಿಗಳನ್ನು ಖರೀದಿಸಲಾಗಿದೆಯೇ? (ಅನುಸರಿಸಿರುವ ಮಾರ್ಗ ಮತ್ತು ಮಾಹಿತಿಯನ್ನು ಒದಗಿಸುವುದು)

ಶ್ರೀ ಎಸ್.ಎ. ರವೀಂದ್ರನಾಥ (ಗ್ರಾಮೀಣ ನೀರು ಪೂರೈಕೆ, ನೈರ್ಮಲ್ಯ ಮತ್ತು ಸಕ್ಕರೆ ಸಚಿವರು):

ಅ) ಹೌದು.

ಆ) ಮತ್ತು ಇ) 2005–06ರ ಸಾಲಿನಲ್ಲಿ ಹಾಸನ ಜಿಲ್ಲೆಯಲ್ಲಿ ಟಾಸ್ಕ್‌ಫೋರ್ಸ್‌ನಡಿ ಅನುಮೋದನೆಯಾಗಿ ಅನುಷ್ಠಾನಗೊಳಿಸಿರುವ ಕಾಮಗಾರಿಗಳ ವಿವರ ಕೆಳಕಂಡಂತಿವೆ.

| ಕ್ರ.ಸಂ. | ಕಾಮಗಾರಿಗಳ ವಿವರ | ಹಾಸನ | ಚನ್ನರಾಯಪಟ್ಟಣ |
|---|---|---|---|
| 1. | ನಳ ನೀರು ಸರಬರಾಜು ಯೋಜನೆಗಳ ಪುನಃಶ್ಚೇತನ | 15 | 60 |
| 2. | ಕಿರು ನೀರು ಸರಬರಾಜು ಯೋಜನೆಗಳ ಪುನಃಶ್ಚೇತನ | 56 | 79 |
| 3. | ಹೊಸ ಕೊಳವೆ ಬಾವಿಗಳು | 219 | 181 |
| 4. | ತೆರೆದ ಬಾವಿಗಳು | 7 | |
| 5. | ಮರು ಆಳ/ ಹೈಡ್ರೋಫ್ರಾಕ್ಚರಿಂಗ್ | 52 | |
| | **ಒಟ್ಟು** | **349** | **320** |

ತುರ್ತು ಅವಶ್ಯಕತೆ ಆಧರಿಸಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಎನ್‌ರೋಲ್ ಮಾಡಿರುವ ಗುತ್ತಿಗೆದಾರರಿಂದ ತುಂಡು ಗುತ್ತಿಗೆ ಆಧಾರದ ಮೇಲೆ ಕುಡಿಯುವ ನೀರಿನ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗಿದೆ.

ಈ) 1999ರ ಪಾರದರ್ಶಕ ಕಾಯ್ದೆ 4(ಇ–II)ರಂತೆ ರೂ. 2.00 ಲಕ್ಷ ಮೌಲ್ಯದ ಒಳಪಟ್ಟ ಕಿರು ನೀರು ಸರಬರಾಜು ಯೋಜನೆಗಳು, ಶಾಲಾ ಕಟ್ಟಡಗಳ ಕಾಮಗಾರಿಗಳನ್ನು ಜಿಲ್ಲಾ ಪಂಚಾಯತ್ ಮಟ್ಟದಲ್ಲಿ ಅನುಷ್ಠಾನಗೊಳಿಸಲಾಗಿದೆ.

ಉ) ಬೇಸಿಗೆಯಲ್ಲಿ ತೊಂದರೆಗೊಳಗಾಗಿದ್ದ ಗ್ರಾಮಗಳಿಗೆ ತುರ್ತಾಗಿ ಕುಡಿಯುವ ನೀರಿನ ವ್ಯವಸ್ಥೆ ಕಲ್ಪಿಸಲು ಪಾರದರ್ಶಕ ಕಾಯ್ದೆಯಡಿ PRED ರಾಜ್ಯಮಟ್ಟದಲ್ಲಿ ಟೆಂಡರ್ ಕರೆದು ಅನುಮೋದಿಸಿರುವ ಸಂಸ್ಥೆಗಳಿಂದ ಸಾಮಗ್ರಿಗಳನ್ನು ಖರೀದಿಸಿ ಕಾಮಗಾರಿಗಳಿಗೆ ವಿತರಿಸಲಾಗಿದೆ.

**ಶ್ರೀ ಬಿ. ಶಿವರಾಮು :** ಮಾನ್ಯ ಅಧ್ಯಕ್ಷರೆ, ಟಾಸ್ಕ್‌ಫೋರ್ಸ್‌ನಡಿಯಲ್ಲಿ ಕುಡಿಯುವ ನೀರಿನ ಕಾಮಗಾರಿಗಳ ಅನುಷ್ಟಾನವನ್ನು ಎರಡು ಲಕ್ಷದ ಮೌಲ್ಯಕ್ಕಿಂತ ಕಡಿಮೆ ಇದ್ದರೆ ತುಂಡು ಗುತ್ತಿಗೆ ಆಧಾರದ ಮೇಲೆ ಅನುಷ್ಟಾನಗೊಳಿಸಿದ್ದೇವೆ ಎನ್ನತಕ್ಕಂಥ ಮಾತನ್ನು ತಾವು ಹೇಳಿದ್ದೀರಿ. ತುಂಡುಗುತ್ತಿಗೆ ಆಧಾರದ ಮೇಲೆ ಅನುಷ್ಟಾನಗೊಳಿಸತಕ್ಕಂಥ ಸಂದರ್ಭದಲ್ಲಿ ಸಂಬಂಧಪಟ್ಟಂಥ ಗುತ್ತಿಗೆದಾರ ಕಾಮಗಾರಿಗೆ ಸಂಬಂಧಪಟ್ಟಂಥ ಸಾಮಗ್ರಿಗಳನ್ನು ಆತನೇ ತಂದು ಹಾಕಬೇಕೇ ಅಥವಾ ಇಲಾಖೆ ಒದಗಿಸಬೇಕೆಂಬುದು ನನ್ನ ಮೊದಲ ಪ್ರಶ್ನೆ. ಒಂದು ವೇಳೆ ಇಲಾಖೆಯವರು

ಒದಗಿಸಬೇಕೆಂದಿದ್ದರೆ, ಇದಕ್ಕೆ ಇಲಾಖೆಯವರು ಅನುಸರಿಸಬೇಕಾದ ಮಾರ್ಗಗಳೇನು? ಪಾರದರ್ಶಕ ಕಾಯಿದೆ ಅಡಿಯಲ್ಲಿ ಜಿಲ್ಲಾ ಮಟ್ಟದಲ್ಲಿ ಅದಕ್ಕೆ ಟೆಂಡರ್ ಕರೆದು ಸಾಮಗ್ರಿಗಳನ್ನು ಖರೀದಿಸಬೇಕೇ ಅಥವಾ ಯಾವ ಮಾರ್ಗವನ್ನು ಅನುಸರಿಸಬೇಕೆಂಬುದನ್ನು ತಾವು ತಿಳಿಸಬೇಕು.

**ಶ್ರೀ ಗೋವಿಂದ ಎಂ. ಕಾರಜೋಳ (ಎಸ್.ಎ. ರವೀಂದ್ರನಾಥ್ ಪರವಾಗಿ)** : ಮಾನ್ಯ ಅಧ್ಯಕ್ಷರೆ, ಪಾರದರ್ಶಕ ಕಾಯ್ದೆ ಸೆಕ್ಷನ್–4 (II) ಪ್ರಕಾರ 2 ಲಕ್ಷ ರೂಪಾಯಿಗಳವರೆಗಿನ ಕಾಮಗಾರಿಗಳಿಗೆ ಈ ಪಾರದರ್ಶಕ ಕಾಯ್ದೆ ಅಡಿಯಲ್ಲಿ ವಿನಾಯತಿ ನೀಡಿ ವಹಿಸಿಕೊಡುವುದಕ್ಕೆ ಅವಕಾಶ ಇದೆ. ಅದರ ಜೊತೆಯಲ್ಲಿ ದಿನಾಂಕ: 16–9–2005ರಂದು ನ್ಯಾಚುರಲ್ ಕೆಲಾಮಿಟಿ ಮತ್ತು ಎಮರ್ಜೆನ್ಸಿ ಸಂದರ್ಭದಲ್ಲಿ ಕುಡಿಯುವ ನೀರಿಗೆ ಅಥವಾ ಮತ್ತೊಂದು ಕೆಲಸಗಳಿಗೆ ಈ ಕಾಯ್ದೆಯ ಸೆಕ್ಷನ್ (4)ರ ಪ್ರಕಾರ ವಿನಾಯ್ತಿ ಮಾಡಿ ವಹಿಸಿಕೊಡುವುದಕ್ಕೆ ಅವಕಾಶವನ್ನು ಸರ್ಕಾರ ಮಾಡಿಕೊಟ್ಟಿದೆ. ಮತ್ತೆ ಮಾನ್ಯ ಸದಸ್ಯರು ಹೇಳಿದ ಹಾಗೆ ಟಾಸ್ಕ್‌ಫೋರ್ಸ್ ಅಥವಾ ಇನ್ನುಳಿದ ಕೆಲಸಗಳಿಗೆ ಸಾಮಗ್ರಿಗಳ ಖರೀದಿ ಮಾಡಬೇಕಾದರೆ ಟೆಂಡರ್ ಕರೆದು ಮಾಡಬೇಕೇ ಅಥವಾ ಜಿಲ್ಲಾ ಮಟ್ಟದಲ್ಲಿ ಎಗ್ಜಿಕ್ಯೂಟಿವ್ ಇಂಜಿನಿಯರ್ ಮಾಡಬೇಕೇ ಅಥವಾ ಸಿಇಓರವರು ಮಾಡಬೇಕೆಂಬ ಪ್ರಶ್ನೆ ಉದ್ಭವಿಸಿದೆ. ರಾಜ್ಯಮಟ್ಟದಲ್ಲಿ ಮುಖ್ಯ ಇಂಜಿನಿಯರ್‌ರವರು ಇಡೀ ರಾಜ್ಯಕ್ಕೆ ಅನ್ವಯಿಸುವಂತೆ ಟೆಂಡರ್ ಕರೆದು ರೇಟ್ ಕಾಂಟ್ರ್ಯಾಕ್ಟ್‌ನ್ನು ಫಿಕ್ಸ್ ಮಾಡುತ್ತಾರೆ. ಅವರು ರೇಟ್‌ನ್ನು ಅನುಮೋದನೆ ಮಾಡಿರುತ್ತಾರೆ. ಆ ರೇಟ್‌ಗೆ ಅನುಗುಣವಾಗಿ ಖರೀದಿ ಮಾಡುವುದಕ್ಕೆ ಪ್ರತಿಯೊಬ್ಬ ಎಗ್ಜಿಕ್ಯೂಟಿವ್ ಇಂಜಿನಿಯರ್‌ಗೆ ಸಿಇಓಗಳಿಗೆ ಅಧಿಕಾರವನ್ನು ಕೊಡಲಾಗಿದೆ.

**ಶ್ರೀ ಬಿ. ಶಿವರಾಮು** : ಮಾನ್ಯ ಅಧ್ಯಕ್ಷರೆ, ಎರಡು ಲಕ್ಷ ರೂ ಮೌಲ್ಯದ ಕಾಮಗಾರಿಗಳನ್ನು ತುಂಡು ಗುತ್ತಿಗೆ ಆಧಾರದ ಮೇಲೆ ಅನುಷ್ಟಾನಗೊಳಿಸಬಹುದೆಂದು ಹೇಳಿದ್ದೀರಿ. ನನ್ನ ಆ ಪ್ರಶ್ನೆಗೆ ತಾವು ಉತ್ತರ ಹೇಳಲಿಲ್ಲ. ಅದೇನೆಂದರೆ, ಎರಡು ಲಕ್ಷದ ಕಾಮಗಾರಿಗಳನ್ನು ತಾವು ಗುತ್ತಿಗೆದಾರರಿಗೆ ಅಗ್ರಿಮೆಂಟ್ ಮಾಡಿದ ಮೇಲೆ ಕಾಮಗಾರಿಯನ್ನು ಸಾಮಗ್ರಿ ಸಮೇತ ಅನುಷ್ಟಾನಗೊಳಿಸತಕ್ಕಂಥದ್ದೇ ಅಥವಾ ಕೇವಲ ಸಿವಿಲ್ ವರ್ಕ್‌ಗಳನ್ನು ಮಾತ್ರ ಮಾಡತಕ್ಕಂಥದ್ದೆ ಎಂಬುದು ನನ್ನ ಪ್ರಶ್ನೆಯಾಗಿದೆ.

**ಶ್ರೀ ಗೋವಿಂದ ಎಂ. ಕಾರಜೋಳ** : ಕೆಲವೊಂದು ಬಾರಿ ಏನಾಗುತ್ತೆಂದರೆ, ಒಂದು ಪ್ಯಾಕೇಜ್‌ಗೆ ಅಂದಾಜು ಮಾಡಿ ಅವರಿಗೆ ಕೊಟ್ಟರೂ ಕೂಡ ಕೆಲವು ಗುತ್ತಿಗೆದಾರರಿಗೆ ಕೆಲಸ ಮಾಡಲು ಸಾಮರ್ಥ್ಯ ಇಲ್ಲದೇ ಕೆಲಸವನ್ನು ಅರ್ಧಕ್ಕೆ ನಿಲ್ಲಿಸತಕ್ಕಂಥ ಸಂದರ್ಭ ಬಂದರೆ ಅಥವಾ ಇನ್ನು ಇತರೇ ಸಂದರ್ಭಗಳಲ್ಲಿ, ನಮ್ಮ ಇಲಾಖೆಗಳಲ್ಲಿ ಸಾಮಗ್ರಿಗಳು ಇದ್ದರೆ, ಅವುಗಳನ್ನು ಕೊಟ್ಟು ಆನಂತರ ಬಿಲ್‌ನಲ್ಲಿ ರಿಕವರಿ ಮಾಡತಕ್ಕಂಥ ವ್ಯವಸ್ಥೆ ಇದೆ.

**ಶ್ರೀ ಬಿ. ಶಿವರಾಮು** : ನನ್ನ ಮೂಲಭೂತವಾದ ಪ್ರಶ್ನೆ ಏನೆಂದರೆ, ನಮ್ಮ ಜಿಲ್ಲೆಯಲ್ಲಿ 2005–06ನೇ ಸಾಲಿನಲ್ಲಿ 669 ಕಾಮಗಾರಿಗಳನ್ನು ಅನುಷ್ಟಾನಗೊಳಿಸಲಾಗಿದೆ. ಸಾಧಾರಣ ಇದು 12 ಕೋಟಿ ರೂಪಾಯಿ ಕಾಮಗಾರಿಯಾಗಿದೆ. ಇದರಲ್ಲಿ ಸುಮಾರು 8 ಕೋಟಿ ರೂಪಾಯಿಗಳಷ್ಟು

ಸಾಮಗ್ರಿಗಳನ್ನು ಖರೀದಿ ಮಾಡಲಾಗಿದೆ. ಎರಡು ಲಕ್ಷದ ಒಳಗಡೆ ಗುತ್ತಿಗೆದಾರರಿಗೆ ಅನುಷ್ಠಾನಕ್ಕೆ ಅವಕಾಶ ಕಲ್ಪಿಸಿದ್ದರೂ ಕೂಡ ಸಾಮಗ್ರಿಗಳನ್ನು ಇಲಾಖೆಯವರೆ ಸರಬರಾಜು ಮಾಡತಕ್ಕಂಥ ಕೆಲಸ ಆಗಿದೆ. ಸಂಬಂಧಪಟ್ಟಂಥ ಗುತ್ತಿಗೆದಾರರು ಸಾಮಗ್ರಿಗಳನ್ನು ತಂದು ಹಾಕತಕ್ಕಂಥ ಅವಕಾಶವನ್ನು ಕಲ್ಪಿಸುವುದಿಲ್ಲ. ಯಾರಿಗೋ ಒಬ್ಬರಿಗೆ ಯಾವಾಗಲೂ ಕೊಡತಕ್ಕಂಥ ಸಾಮಗ್ರಿಗಳನ್ನು ಸಪ್ಲೈಗೆ ಆರ್ಡರ್ಸ್ ಕೊಟ್ಟು ಖರೀದಿ ಮಾಡತಕ್ಕಂಥದು ಆಗಿದೆ. ಆದ್ದರಿಂದ ಅದರ ಒಳಗಡೆ ಏನಿದೆ ಎನ್ನತಕ್ಕಂಥದರ ಬಗ್ಗೆ ತಾವು ಯೋಚನೆ ಮಾಡಬೇಕು. ನಾನು ಇದಕ್ಕೋಸ್ಕರ ಪಾರದರ್ಶಕ ಕಾಯ್ದೆ ಅಡಿಯಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆಯೇ ಎಂಬ ಮಾತನ್ನು ನಾನು ಕೇಳಿದೆ. ಅಲ್ಲಿ ಎರಡು ಕೆಲಸಗಳು ಆಗುತ್ತಿವೆ. ಅದೇನೆಂದರೆ, ಒಂದು ಅಲ್ಲಿ ಗುತ್ತಿಗೆದಾರನಿದ್ದರೂ ಕೂಡ ಮೆಟೀರಿಯಲ್‌ಗಳನ್ನು ಫೋರ್ಸ್‌ಬಲ್ ಆಗಿ ಕೊಡುತ್ತಿರುವುದು ಎರಡನೆಯದಾಗಿ ಕ್ವಾಲಿಟಿಯ ಬಗ್ಗೆ ಪರೀಕ್ಷೆ ನಡೆಯುತ್ತಿಲ್ಲ. ಸಬ್ ಸ್ಟ್ಯಾಂಡರ್ಡ್ ಮೆಟೀರಿಯಲ್‌ನ್ನು ಸರಬರಾಜು ಮಾಡಿದರು ಕೂಡ ಅದನ್ನು ಅನುಷ್ಠಾನ ಮಾಡಿಕೊಂಡು ಹೋಗುತ್ತಿದ್ದರೆ, ಎಷ್ಟರ ಮಟ್ಟಿಗೆ ಆ ಯೋಜನೆ ಫಲಪ್ರದವಾಗುತ್ತದೆಂದು ಮತ್ತು ಎಷ್ಟು ದಿವಸ ಇರುತ್ತದೆ ಎಂಬುದು ಮತ್ತು ಕುಡಿಯುವ ನೀರಿನ ಸಮಸ್ಯೆ ನಿರಂತರವಾಗಿ ಬಗೆಹರಿಯುತ್ತದೆಯೇ ಎಂಬುದು ಪ್ರಶ್ನೆಯಾಗಿದೆ. ಅದಕ್ಕೋಸ್ಕರ ನಾನು ಹೇಳುವುದೇನೆಂದರೆ, ಮೆಟೀರಿಯಲ್ ಸರಬರಾಜು ಮಾಡತಕ್ಕಂಥದ್ದಕ್ಕೆ ಎಗ್ಜಿಕ್ಯೂಟಿವ್ ಇಂಜಿನಿಯರ್‌ರವರು ಏನೊಂದು ಈ ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಇದಕ್ಕೊಂದು ಮಿತಿಯನ್ನು ಹಾಕಬೇಕು. ಮತ್ತೆ ಮೆಟೀರಿಯಲ್ ಕ್ವಾಲಿಟಿ ಇದೆಯೋ ಅಥವಾ ಇಲ್ಲವೋ ಎನ್ನತಕ್ಕಂಥದ್ದು ವಿಚಾರಣೆ ಆಗಬೇಕೆಂಬುದು ನನ್ನ ಮೂಲಭೂತವಾದ ಪ್ರಶ್ನೆಯಾಗಿದೆ.

**ಶ್ರೀ ಗೋವಿಂದ ಎಂ. ಕಾರಜೋಳ :** ಮಾನ್ಯ ಅಧ್ಯಕ್ಷರೆ, ಯಾವುದೇ ಗುತ್ತಿಗೆದಾರನಿಗೆ ಒತ್ತಾಯದ ಮೂಲಕ ಸಾಮಗ್ರಿಗಳನ್ನು ಪೂರೈಸುವುದಿಲ್ಲ.

**ಶ್ರೀ ಕೆ. ಶ್ರೀನಿವಾಸಗೌಡ :** ನನ್ನದೊಂದು ಪ್ರಶ್ನೆ. ಈ ವರ್ಷ ನಮಗೆ ಕುಡಿಯುವ ನೀರಿಗೆ ತೊಂದರೆ ಇಲ್ಲ. ಆದ್ದರಿಂದ ಮೆಟೀರಿಯಲ್ ವಿಷಯದ ಬಗ್ಗೆ ಹೇಳುವುದಾದರೆ, ಹಿಂದೆ ರಾಧಾಕೃಷ್ಣ ಎಂಬ ಒಂದು ಕಂಪನಿ ಇತ್ತು. ಈಗಿನ ಪಂಪ್‌ಸೆಟ್ ಮೋಟರ್‌ಗಳು ಮೂರು ದಿನ ಕೂಡ ನಡೆಯುವುದಿಲ್ಲ. ನಾನು 1972ನೇ ಇಸವಿಯಲ್ಲಿ ನನ್ನ ತೋಟದಲ್ಲಿ ಒಂದು ಬೋರ್‌ವೆಲ್ ಹಾಕಿದ್ದು ಅವತ್ತಿನ ದಿವಸ ಹಾಕಿದ ಮೋಟರ್ ಇವತ್ತೂ ಕೂಡ ನಡೆಯುತ್ತಿದೆ. ಆದರೆ, ಇವತ್ತಿನ ದಿವಸ ಸರ್ಕಾರಿ ಡಿಪಾರ್ಟ್‌ಮೆಂಟ್‌ನಿಂದ ಕೊಡತಕ್ಕಂಥ ಪಂಪ್‌ಸೆಟ್‌ಗಳು ಮೂರು ದಿವಸದಿಂದ 10 ದಿವಸದೊಳಗೆ ಹಾಳಾಗಿ ಹೋಗುತ್ತವೆ. ಅವರು ಕೊಡತಕ್ಕಂಥ ಸ್ಟಾರ್ ಅಥವಾ ಕೇಬಲ್ ಇರಬಹುದು. ಕಿಸಾನ್ ಅಥವಾ ಇನ್ಯಾವುದೋ ಪಿವಿಸಿ ಪೈಪ್ ಕೊಡುತ್ತಾರೆ. ಅದರೊಳಗೆ ನೀರು ಹೋಗುತ್ತಿರುವಾಗಲೇ ಅವುಗಳು ಬಿಚ್ಚಿಕೊಂಡು ಹೋಗುತ್ತವೆ. ಆದರೆ, ಇವುಗಳಿಗೂ ಕೂಡ ಐಎಸ್‌ಐ ಮಾರ್ಕ್ ಇದೆ. ಎಷ್ಟು ದುರಂತ ನೋಡಿ. ಆದ್ದರಿಂದ ಟೆಕ್ಸ್‌ಮೋ ಕಂಪನಿಯ

ಮೋಟರ್‌ಗಳನ್ನ ಕೊಡಬೇಕೆಂದು ಮಾಡಬೇಕು ಮತ್ತೆ ಯಾವುದು ಒಳ್ಳೆಯ ಕಂಪನಿಯ ಪಿವಿಸಿ ಪೈಪ್‌ಗಳನ್ನೇ ಕೊಡಬೇಕೆಂದು ಮಾಡಬೇಕು. ಇವತ್ತಿನ ದಿವಸ ಎಲ್ಲದಕ್ಕೂ ಕೂಡ ಐಎಸ್‌ಐ ಮಾರ್ಕ್ ಇದೆ. ISI ಇದೆ. ಕೆಲವು ಕಂಪನಿಗಳಲ್ಲಿ ಇವತ್ತಿಗೂ ಕೂಡ ಒಳ್ಳೆಯ ಪೈಪ್‌ಗಳು ಬರುತ್ತಿವೆ, ಪಿವಿಸಿ ಪೈಪ್, ಕೇಬಲ್, ಇವುಗಳನ್ನು ಸರಬರಾಜು ಮಾಡಲು ಸರಿಯಾದ ಕಂಪನಿಗಳಿಗೆ ಕೊಡದಿದ್ದರೆ ಸಾರ್ವಜನಿಕರ ಹಣವು ಪೋಲು ಆಗುತ್ತದೆ. ಅಲ್ಲಿ ಹಳ್ಳಿಗಳಲ್ಲಿರುವ ನೀರಿಗೂ ಕೂಡ ಹಾಹಾಕಾರ ಉಂಟಾಗುತ್ತದೆ. ಇದಕ್ಕೆ ಆದ್ಯತೆಯನ್ನು ನೀವೇ ಕಲ್ಪಿಸಿಕೊಳ್ಳಿ. ನೀವು ಡೊರೆಬಿಲಿಟಿ ನೋಡಿ ಕೊಡಿ, ಟೆಕ್ಸ್‌ಮೋ ಮೋಟಾರ್ ನಾನು ಹೇಳಿದಂತೆ ನಮ್ಮ ಜಮೀನಿನಲ್ಲಿ 1972ನೇ ಇಸ್ವಿಯಲ್ಲಿ ಹಾಕಿಸಿದ್ದು ಅದು ಇವತ್ತಿನವರೆಗೂ ನಡೆಯುತ್ತಿದೆ. ಈ ತರಹ ಇರುವ ಮೋಟರ್‌ಗಳನ್ನು ನೋಡಿ ಕೊಳ್ಳುವಂಥದ್ದನ್ನು ಸರ್ಕಾರದಿಂದ ನೀವು ಒಂದು ಸುತ್ತೋಲೆಯನ್ನು ಹೊರಡಿಸಿ, ಆದ ಅದರಷ್ಟಕ್ಕೆ ಅದು ಸರಿ ಹೋಗುತ್ತದೆ.

**ಶ್ರೀ ಬಿ. ಶಿವರಾಂ** : ಮಾನ್ಯ ಅಧ್ಯಕ್ಷರೆ, ಕ್ವಾಲಿಟಿ ಮೆಟೀರಿಯಲ್ಸ್‌ಗೋಸ್ಕರವೇ ರಾಜ್ಯ ಮಟ್ಟದಲ್ಲಿ ತೀರ್ಮಾನವಾಗಿದೆ. ಅವನು ಸಪ್ಲೈ ಮಾಡತಕ್ಕಂಥ ಮೆಟೀರಿಯಲ್ಸ್ ISI ಮಾರ್ಕ್ ಇದೆ. ನೀವು ಹೇಳಿದಂಥ ಮಾರ್ಕ್‌ನ ಗುರುತುಗಳು ಅದರ ಮೇಲೆ ಇರುತ್ತದೆ. ಆದರೆ ಸಪ್ಲೈ ಮಾಡಿರತಕ್ಕಂಥ ಮೆಟೀರಿಯಲ್ಸ್ ಅದು ಅಲ್ಲ. ಅದನ್ನು ಪರೀಕ್ಷೆ ಮಾಡುವುದಕ್ಕೆ ಒಳಪಡಿಸುವ ಕೆಲಸ ಇಲ್ಲಿವರೆಗೆ ಆಗಲಿಲ್ಲ. ನಾನು ಹೇಳಿರತಕ್ಕಂಥದ್ದರ ಬಗ್ಗೆ ಹೌದು ಅಥವಾ ಅಲ್ಲವೇ ಎನ್ನುವುದರ ಬಗ್ಗೆ ಸತ್ವ ಪರೀಕ್ಷೆ ಆಗಬೇಕಾದರೆ ತಾವು ಕೂಡಲೇ ಒಂದು ಎನ್‌ಕ್ವೈಯರಿಗೆ ಆರ್ಡರ್ ಮಾಡಿ. ಆ ಒಂದು ವರ್ಷದಲ್ಲಿ ಕನಿಷ್ಟ ಅವನು ಸಪ್ಲೈ ಮಾಡಿರತಕ್ಕಂಥ ಮೆಟೀರಿಯಲ್ಸ್ ಯಾವ ಕಂಪನಿಯವರು ಮಾಡಿದ್ದಾರೆ, ಅದೇ ಕಂಪನಿಯ ಮೆಟೀರಿಯಲ್ಸ್ ಆಗಿದೆಯೇ ಆ ಗುಣಮಟ್ಟ ಇದೆಯಾ ಎನ್ನತಕ್ಕಂಥ ದೃಢೀಕರಣವಾಗುವಂತೆ ಮಾಡಬೇಕು.

**ಶ್ರೀ ಅಂಜನಮೂರ್ತಿ** : ಮಾನ್ಯ ಅಧ್ಯಕ್ಷರೆ, ಮಾನ್ಯ ಶ್ರೀನಿವಾಸಗೌಡರು ಹಾಗೂ ಶಿವರಾಂರವರು ಹೇಳಿದ್ದಕ್ಕೆ ಪೂರಕವಾಗಿ ಒಂದು ದೊಡ್ಡ ದುರಂತವನ್ನು ಹೇಳುತ್ತೇನೆ. 9 ತಿಂಗಳ ಹಿಂದೆ ಟಾಸ್ಕ್‌ಫೋರ್ಸ್‌ದಿಂದ ಅನುಮೋದನೆ ಪಡೆದಂಥ ಜಾಗದಲ್ಲಿ ಬೋರ್‌ವೆಲ್ ಕೊರೆದಿದ್ದಾರೆ. ಆದರೆ ಇದುವರೆಗೆ ಅಲ್ಲಿ ಪೈಪ್ ಆಗಲೀ ಮೋಟರ್ ಆಗಲೀ ಅಳವಡಿಸಿಲ್ಲ. ಅದರಲ್ಲಿ ಕಲ್ಲು ಮಣ್ಣು ಬಿದ್ದು ಅದನ್ನು ಇನ್ನೊಂದು ಸಲ ಕೊರೆಯಬೇಕಾಗುತ್ತದೆ. ಆದ್ದರಿಂದ ಟಾಸ್ಕ್‌ಫೋರ್ಸ್‌ದಿಂದ ಕೊರೆದಿರುವ ಕೊಳವೆ ಬಾವಿಗಳಿಗೆ ಪೈಪ್ ಮತ್ತು ಮೋಟರ್‌ಗಳನ್ನು ಅಳವಡಿಸುವಂತೆ ಒಂದು ಆದೇಶವನ್ನು ಹೊರಡಿಸಬೇಕು.

**ಶ್ರೀ ಸಿದ್ದು ಸವದಿ** : ಮಾನ್ಯ ಅಧ್ಯಕ್ಷರೆ, ಅದಕ್ಕೆ ಪೂರಕವಾಗಿ ನನ್ನದೊಂದು ಪ್ರಶ್ನೆ. ಈಗಾಗಲೇ ಹಿರಿಯ ಸದಸ್ಯರು ಹೇಳಿರುವ ಪ್ರಕಾರ ಸರ್ಕಾರಿ ಇಲಾಖೆಗಳಿಗೆ ಸಪ್ಲೈವಾಗುವಂಥ ಈ ಎಲೆಕ್ಟ್ರಿಕಲ್ ಗೂಡ್ಸ್ ಪಂಪ್‌ಸೆಟ್, ಕೇಬಲ್, ಪ್ಯಾನೆಲ್ ವಗೈರೆ, ಈಗ ಅನೇಕ ಇಲಾಖೆಗಳಿಗೆ ಕಳಪೆಮಟ್ಟದ

ಮೆಟೀರಿಯಲ್ಸ್‌ಗಳನ್ನು ಸಪ್ಲೈ ಮಾಡುತ್ತಾರೆ. ಉದಾಹರಣೆಯಾಗಿ ಹೇಳಬೇಕೆಂದರೆ, ಹೋದವರ್ಷ ಗಂಗಾ ಕಲ್ಯಾಣ ಯೋಜನೆಯಡಿಯಲ್ಲಿ ಸಮಾಜ ಕಲ್ಯಾಣ ಇಲಾಖೆಗೆ ಸಪ್ಲೈ ಮಾಡಿದಂಥ ಪಂಪ್‌ಸೆಟ್‌ಗಳು ಏನಿವೆ ಅದಕ್ಕೆ ನಿಶ್ಚಿತವಾದ ಒಂದು ನೇಮ್ ಇದೆ. 45 ಎಫಿಷಿಯನ್ಸಿ ಇದ್ದರೆ ಮಾತ್ರ ಆ ಪಂಪ್‌ಸೆಟ್‌ಗಳನ್ನು ಇಲಾಖೆಯಿಂದ ಖರೀದಿ ಮಾಡಿ ಎಸ್‌ಸಿ:ಎಸ್‌ಟಿ ಜನಾಂಗಕ್ಕೆ ಕೊಡಬೇಕು, ಅದು ಯಾವ ನಿಯಮವನ್ನು ಪಾಲಿಸಲಾರದೆ, ಇಲ್ಲಿರುವ ಬಜಾರದಲ್ಲಿ ಹೋದರೆ 35 ಸಾವಿರ ರೂ.ಗಳಿಗೆ ಸಿಗುವಂಥ ಪಂಪ್‌ಸೆಟ್ 7–8 ಸಾವಿರ ರೂ.ಗಳಿಗೆ ಸಿಗುತ್ತವಂತೆ, ಅಂಥವುಗಳಿಗೆ ISI ಮಾರ್ಕ್ ಹಾಕಿ ಈ ಇಲಾಖೆಗೆ ಸಪ್ಲೈ ಮಾಡುವುದರ ಮುಖಾಂತರ ಎಸ್‌ಸಿ:ಎಸ್‌ಟಿ ಯವರ ಭವಿಷ್ಯವನ್ನು ನಿರ್ಮಾಣ ಮಾಡುವಂಥ ಯೋಜನೆಗೆ ಸಂಪೂರ್ಣ ವಿಫಲವಾಗಿದೆ. ಇದೇ ವರ್ಷದಲ್ಲಿ ಟೆಂಡರ್‌ನ್ನು ಕರೆದಾಗ 9,000 ರೂ.ಗಳನ್ನು ಕಡಿಮೆ ಮಾಡಿ ಕೋಟ್ ಮಾಡಿದ್ದಾರೆ. ಸುಮಾರು 10,000 ಪಂಪ್‌ಸೆಟ್‌ಗಳನ್ನು ಖರೀದಿ ಮಾಡಿದಾಗ ಅದಕ್ಕೆ 10 ಸಾವಿರಗಳಂತೆ ಲೆಕ್ಕವನ್ನು ಹಾಕಿದಾಗ ಹೋದವರ್ಷ ಸರ್ಕಾರದ ಬೊಕ್ಕಸಕ್ಕೆ 9 ಕೋಟಿ ರೂ.ಗಳು ಹಾನಿಯಾಗಿದೆ. ಕಳಪೆ ಮಟ್ಟದ ಪಂಪ್‌ಸೆಟ್‌ಗಳನ್ನು ವಿತರಣೆ ಮಾಡುವಂಥ ವ್ಯವಸ್ಥೆ ಇಲ್ಲಿ ಜಾರಿಯಲ್ಲಿದೆ. ಅದರ ಬಗ್ಗೆ ಸಂಪೂರ್ಣವಾದ ತನಿಖೆಯನ್ನು ನೀವು ಮಾಡಬೇಕು. ನಮ್ಮ ಹಿರಿಯ ಸದಸ್ಯರು ಹೇಳಿರುವ ಪ್ರಕಾರ ಕ್ವಾಲಿಟಿ ಬಗ್ಗೆ, ಕಳಪೆಮಟ್ಟದ ಬಗ್ಗೆ ತನಿಖೆ ಮಾಡಬೇಕು. ಎಸ್‌ಸಿ:ಎಸ್‌ಟಿ ಯವರ ಭವಿಷ್ಯ ನಿರ್ಮಾಣವಾಗಬೇಕಾಗಿತ್ತು. ಟಾಸ್ಕ್‌ಫೋರ್ಸ್‌ದಲ್ಲಿ ಸಹಿತ ಅದೇ ರೀತಿ ಕಳಪೆಮಟ್ಟದ ವಸ್ತುಗಳ ವಿತರಣೆಯಾಗುವುದರಿಂದ ಕುಡಿಯುವ ನೀರಿಗೂ ತೊಂದರೆಯಾಗುತ್ತದೆ. ಕುಡಿಯುವ ನೀರಿನ ಸಲುವಾಗಿ ಒಳ್ಳೆಯ ಪಂಪ್‌ಸೆಟ್‌ಗಳನ್ನು ಹಾಕಿದರೆ ಒಂದು ಅನುಕೂಲವಾಗುತ್ತದೆ. ರಿಪೇರಿಗೂ ಸಾಕಷ್ಟು ಹಣವನ್ನು ಖರ್ಚು ಮಾಡಬೇಕಾಗುತ್ತದೆ.

**ಅಧ್ಯಕ್ಷರು** : ಮಾನ್ಯ ಸಚಿವರು ಉತ್ತರವನ್ನು ಹೇಳುತ್ತಾರೆ, ನೀವು ಕುಳಿತುಕೊಳ್ಳಿ. ನೀವು ಈ ಎಲ್ಲಾ ವಿಚಾರಗಳನ್ನು ಬೇಡಿಕೆಯ ಮೇಲೆ ಮಾತನಾಡುವಾಗ ಮಾತನಾಡಬೇಕು.

**ಶ್ರೀ ಸಿದ್ದು ಸವದಿ** : ಒಳ್ಳೆಯ ಕ್ವಾಲಿಟಿ ಹಾಕಿದರೆ ಅನುಕೂಲವಾಗುತ್ತದೆ.

**ಅಧ್ಯಕ್ಷರು** : ದಯಮಾಡಿ ಈ ರೀತಿ ಮಾತನಾಡಿದರೆ ಹೇಗೆ?

**ಶ್ರೀ ಗೋವಿಂದ ಎಂ. ಕಾರಜೋಳ** : ಮಾನ್ಯ ಅಧ್ಯಕ್ಷರೆ, ಪಂಪ್‌ಸೆಟ್ ಹಾಗೂ ಪೈಪ್‌ಗಳ ಗುಣಮಟ್ಟದ ಬಗ್ಗೆ ಬಹಳಷ್ಟು ಜನ ಸದಸ್ಯರು ಆಕ್ಷೇಪವನ್ನು ವ್ಯಕ್ತ ಮಾಡಿದರು. ಮತ್ತು ಹಿಂದಿನ ಕೃಷಿ ಸಚಿವರಾದ ಶ್ರೀನಿವಾಸಗೌಡರು ಟೆಕ್ಸ್‌ಮೋ ಹಾಕಬೇಕೆನ್ನುವ ಸಲಹೆಯನ್ನು ಮಾಡಿದರು. ಮತ್ತು ಇನ್ನೂ ಕೆಲವು ಜನ ಸದಸ್ಯರು ಫಿನೊಲೆಕ್ಸ್ ಪೈಪ್‌ಗಳನ್ನು ಹಾಕಬೇಕು ಎನ್ನುವ ಸಲಹೆಯನ್ನು ಮಾಡಿದರು. ಇದರಲ್ಲಿ ಏನಾಗುತ್ತದೆಂದರೆ, ಫಿನೊಲೆಕ್ಸ್ ಪೈಪ್‌ಗಳಿಗೆ ಮಾತ್ರ ಟೆಂಡರ್‌ನ್ನು ಕರೆದರೆ, ಇನ್ನುಳಿದ ಕಂಪನಿಯವರು ತಕರಾರು ಮಾಡುತ್ತಾರೆ. ನಾಳೆ ಅದೇ ಕಂಪನಿಯವರಿಗೆ ಅನುಕೂಲ ಮಾಡಿಕೊಡುವ ಸಲುವಾಗಿ ಟೆಂಡರ್ ಕರೆಯಲಾಗಿದೆ ಎಂದು ಹೇಳುತ್ತಾರೆ. ಟೆಕ್ಸ್‌ಮೋಗೆ ಟೆಂಡರ್

ಕರೆದರೆ ಇನ್ನುಳಿದ ಕಂಪನಿಯವರು ಬರುತ್ತಾರೆ. ನಾಳೆ ದಿವಸ ಅವರೂ ತಕರಾರು ಮಾಡುತ್ತಾರೆ. ಆ ಕಂಪನಿಗೆ ಫೇವರ್ ಮಾಡುವ ಸಲುವಾಗಿ ಮಾಡಿದ್ದೀರಿ ಎಂದು ಅನ್ನುತ್ತಾರೆ. ಅದಕ್ಕಾಗಿ ನಾವು ಐಎಸ್ಐ ಗುಣಮಟ್ಟದ ಪಂಪ್‌ಸೆಟ್‌ಗಳನ್ನು ಖರೀದಿ ಮಾಡಬೇಕಾಗುತ್ತದೆ. ಐಎಸ್ಐನಲ್ಲಿ ಏನು ಸ್ಪೆಷಿಫಿಕೇಶನ್ ಇದೆ, ಆ ಗುಣಮಟ್ಟದ ಪೈಪ್‌ಗಳನ್ನು ಖರೀದಿ ಮಾಡಬೇಕಾಗುತ್ತದೆ. ಅದಕ್ಕಾಗಿ ನಾವು ಸರ್ವೆಸಾಮಾನ್ಯವಾಗಿ ಯಾವುದೇ ಕಂಪನಿಯ ಹೆಸರನ್ನು ನಮೂದಿಸದೆ ಟೆಂಡರ್ ಕರೆಯತಕ್ಕಂಥದ್ದು ರೂಢಿಯಲ್ಲಿದೆ. ಆದರೆ ಒಂದೆ ಒಂದು ಕಂಪನಿಯ ಟೆಂಡರ್ ಕರೆದರೆ ಆ ಕಂಪನಿಯವನಿಗೂ ಕಿರ್ಲೋಸ್ಕರ್ ಕಂಪನಿಯವನಿಗೂ ಟೆಕ್ಸ್‌ಮೋ ದವರಿಗೂ ಒಂದೆ ರೇಟ್ ಇರುವುದಕ್ಕೆ ಸಾಧ್ಯವಿಲ್ಲ. 5 ಹೆಚ್‌ಪಿ ಪಂಪ್‌ಸೆಟ್‌ಗೆ ಎಷ್ಟು ಸ್ಟೇಜ್ ಪಂಪ್‌ಸೆಟ್ ಇದೆ ಅದಕ್ಕೆ ಒಂದೆ ರೇಟ್ ಇರುವುದಕ್ಕೆ ಸಾಧ್ಯವಿಲ್ಲ. ಅದಕ್ಕಾಗಿ ಏನಾಗುತ್ತದೆಂದರೆ, ಇದು ಬಹಳ ಕಷ್ಟದ ಕೆಲಸವಿದೆ. ಟ್ರಾನ್ಸ್‌ಫರೆನ್ಸಿ ಆಕ್ಟ್‌ನಲ್ಲಿ ಯಾವುದಾದರೊಂದು ಸ್ಪೆಷಿಫಿಕ್ಕಾದ ಕಂಪನಿಯದ್ದು ಕರೆಯಬೇಕೆಂದು ಇಲ್ಲ. ಆಯಾ ಮೋಟರ್ 5, 10, 20, 40, 80, 100 ಹೆಚ್‌ಪಿ ಯಾವುದು ಬೇಕಾಗುತ್ತದೆ ನಾವು ಎಲ್ಲಾ ಕಂಪೆನಿಯಿಂದ ಕರೆಯಬೇಕಾಗುತ್ತದೆ. ಕುಡಿಯುವ ನೀರಿನ ಪರಿಸ್ಥಿತಿ ತುರ್ತಾಗಿ ಇರುತ್ತದೆ. ನಾವು ಟ್ರಾನ್ಸ್‌ಫರೆನ್ಸಿ ಆಕ್ಟ್ ಪ್ರಕಾರ ಟೆಂಡರ್ ಕರೆದು 30–40 ದಿವಸದ ನಂತರ ಆ ಮೆಟೀರಿಯಲ್ಸ್‌ನ್ನು ಖರೀದಿ ಮಾಡಿ ಪಂಪ್‌ಸೆಟ್ ರಿಪೇರಿ ಮಾಡಿದರೆ ಪಂಪ್‌ಸೆಟ್‌ಗಳನ್ನು ಹಾಕಿದರೆ ಅಲ್ಲಿಯವರೆಗೆ ಆ ಗ್ರಾಮದವರಿಗೆ ನೀರನ್ನು ಕುಡಿಯದೆ ಇರಿ ಎಂದು ಹೇಳುವುದಕ್ಕಾಗುತ್ತದೆಯೆ? ಅದಕ್ಕಾಗಿ ಕುಡಿಯುವ ನೀರಿನ ಯೋಜನೆಯನ್ನು ಅನುಷ್ಠಾನ ಮಾಡುವ ಸಂದರ್ಭದಲ್ಲಿ ಕೆಲವೊಂದು ರಿಲ್ಯಾಕ್ಷೇಷನ್ ಮಾಡಬೇಕಾದಂಥ ಸಂದರ್ಭ ಬರುತ್ತದೆ. ಕುಡಿಯುವ ನೀರಿನ ಸಲುವಾಗಿ ಬೇರೆ ಏನೂ ಮಾಡುವುದಕ್ಕಾಗುವುದಿಲ್ಲ. ಅದಕ್ಕಾಗಿ ನಾವು ಏನು ಹೇಳುತ್ತೇವೆಂದರೆ, ಈ ಎಲ್ಲಾ ನಿಯಮಾವಳಿಗಳನ್ನು ಗಮನದಲ್ಲಿಟ್ಟುಕೊಂಡು ನಾವು ಕೆಲಸಗಳನ್ನು ಮಾಡುತ್ತೇವೆ. ಯಾವುದಾದರೂ ಸ್ಪೆಷಿಫಿಕ್ಕಾಗಿ ಇಂತಹ ವಸ್ತುಗಳನ್ನು ಕಳಪೆ ಮಟ್ಟದ್ದು ಖರೀದಿ ಮಾಡಿದ್ದಾರೆಂದರೆ, ಒಡೆದು ಹೋಗಿದೆ, ಕಟ್ಟಿದೆ ಎಂದರೆ ಕೂಡಲೇ ಆ ಅಧಿಕಾರಿಯ ವಿರುದ್ಧ ತನಿಖೆ ಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ.

**ಅಧ್ಯಕ್ಷರು** : ಶಿವರಾಂರವರೇ, ಬಹಳ ಹೊತ್ತಾಯಿತು ಕುಳಿತುಕೊಳ್ಳಿ.

**ಶ್ರೀ ಬಿ. ಶಿವರಾಂ** : ನನ್ನ ಆರೋಪ ಸ್ಪಷ್ಟವಾಗಿದೆ. ಸಾಧಾರಣವಾಗಿ 8 ಕೋಟಿ ರೂ.ಗಳ ಸಾಮಗ್ರಿಗಳನ್ನು ಪರ್ಚೇಸ್ ಮಾಡಿದ್ದಾರೆ. ಒಂದೆ ಕಂಪನಿ ಕೆನರಾ ಪೈಪ್ ಪ್ರೈವೇಟ್ ಲಿಮಿಟೆಡ್ ಇವರು ಹಾಸನ ಜಿಲ್ಲೆಯಲ್ಲಿ ಸಪ್ಲೈಯರ್ ಆ ಗುಣಮಟ್ಟದ ಪರಿಶೀಲನೆಗಾಗಿ ವಿಚಾರಣೆ ಮಾಡಿ ಸಾಕು. ನಿರಂತರವಾಗಿ ಸಾಮಗ್ರಿಗಳನ್ನು ಒಬ್ಬನೇ ಸಪ್ಲೈ ಮಾಡುವುದರ ಮೂಲಕ ಮೋಟರ್‌ಗಳ ಪರಿಸ್ಥಿತಿ ನಮ್ಮ ಮಾಹಿತಿ ಪ್ರಕಾರ ಏನಿದೆ, ಅನಧಿಕೃತವಾದ ಮೋಟರ್‌ಗಳಿಗೆ ಸಿಂಬಲ್ ISI ನೇಮ್‌ನ್ನು ಹಾಕಿರುವಂಥದ್ದಾಗಿದೆ. ಅದಕ್ಕಾಗಿ ಒಂದು ಎನ್‌ಕ್ವಯರಿ ಮಾಡಿ ಪೈಪ್ಸ್ ಬಗ್ಗೆ ಅಷ್ಟೆ. 8 ಕೋಟಿ ರೂ.ಗಳಲ್ಲಿ ಏನಾಗಿದೆ ಎನ್ನುವುದರ ಬಗ್ಗೆ ಎನ್‌ಕ್ವಯರಿ ಮಾಡಿಸಿದರೆ ಗೊತ್ತಾಗುತ್ತದೆ. ಅದು ಸ್ಪಷ್ಟವಾಗಲಿ ಎನ್ನತಕ್ಕಂಥದ್ದರ ಬಗ್ಗೆ ನಾನು ಹೇಳುತ್ತಿದ್ದೇನೆ. ಅದು ಆಗಬಹುದಲ್ಲವೆ?

**ಶ್ರೀ ಸಿದ್ದು ಸವದಿ :** ಎಫಿಷಿಯೆನ್ಸಿ ಚೆಕ್ ಮಾಡುವ ನಿಯಮ ಇದೆ, ಆ ನಿಯಮವನ್ನು ಪಾಲಿಸುತ್ತಿಲ್ಲ ನೋಡಿ.

**ಶ್ರೀ ಅಂಜನಮೂರ್ತಿ :** ಕೊರೆದಿರುವ ಕೊಳವೆ ಬಾವಿಗೆ ಮೋಟರ್ ಅಳವಡಿಸುವ ಬಗ್ಗೆ ಕೂಡ ಮಾನ್ಯ ಸಚಿವರು ಹೇಳಬೇಕು.

**ಶ್ರೀ ಗೋವಿಂದ ಎಂ. ಕಾರಜೋಳ :** ಹಾಸನ ಜಿಲ್ಲೆಯಲ್ಲಿ ಒಂದೇ ಕಂಪನಿಯವರು 12 ಕೋಟಿ ರೂ.ಗಳ ಯೋಜನೆಯಲ್ಲಿ 8 ಕೋಟಿ ರೂ.ಗಳ ಮೆಟೀರಿಯಲ್ಸ್ ಸಪ್ಲೈ ಮಾಡಿದ್ದಾರೆಂದು ಹೇಳುತ್ತಿದ್ದಾರೆ. ಈ ವಾಟರ್ ಸಪ್ಲೈ ಸ್ಕೀಂನಲ್ಲಿ ಏನು ಇರುತ್ತದೆಂದರೆ, 70 ಪರ್ಸೆಂಟ್ ಮೆಟೀರಿಯಲ್ಸ್ ಕಾಸ್ಟ್, 30 ಪರ್ಸೆಂಟ್ ಸಿವಿಲ್ ವರ್ಕ್ ಪೋರ್ಷನ್ ಇರುತ್ತದೆ. ಅದಕ್ಕಾಗಿ 8 ಕೋಟಿ ರೂ.ಗಳು ಆಗಿರಬಹುದು. ಅವರು ಪೂರೈಸಿದಂಥ ಸಾಮಗ್ರಿಗಳು ಗುಣಮಟ್ಟ ಸರಿಯಾಗಿರದಿದ್ದರೆ ಒಂದು ವೇಳೆ ಕೆಟ್ಟು ಹೋಗಿದ್ದರೆ ಇವತ್ತೇ ನಾನು ಎನ್‌ಕ್ವಯರಿ ಮಾಡಿಸುತ್ತೇನೆ. ಅದಸ್ಮಾತ್ತಾಗಿ ತಪ್ಪಿತಸ್ತರೆಂದು ಕಂಡು ಬಂದರೆ ಅವರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ. ನೆಲಮಂಗಲ ಶಾಸಕರು ಏನು ಕೇಳಿದ್ದಾರೆ ಅವರದ್ದು ಹೇಳಿ ಮುಗಿಸಿ ಬಿಡುತ್ತೇನೆ. ಈಗಾಗಲೇ ಕೊರೆದಿರುವ ಕೊಳವೆಬಾವಿಗಳಿಗೆ ಪಂಪ್‌ಸೆಟ್‌ಗಳನ್ನು ಹಾಕಿಕೊಡುವಂಥದ್ದು ರಾಜ್ಯದಲ್ಲಿರುವ ಎಲ್ಲಾ ಜಿಲ್ಲೆಗಳ ಜಿಲ್ಲಾಧಿಕಾರಿಗಳ ಹತ್ತಿರ ಸಿಆರ್‌ಎಫ್ ಬ್ಯಾಂಕ್‌ನಲ್ಲಿ 50–60 ಲಕ್ಷ ರೂ.ಗಳು ಇದೆ. ಅದರಲ್ಲಿ ಯಾವ್ಯಾವ ಊರಿನಲ್ಲಿ ಅವಶ್ಯಕತೆ ಇದೆ ಅದರ ಪಟ್ಟಿ ಕೊಟ್ಟರೆ ಹಾಕಿಕೊಡುವುದಕ್ಕೆ ನಾವು ಡೈರೆಕ್ಷನ್ ಕೊಡುತ್ತೇವೆ.

**ಅಧ್ಯಕ್ಷರು :** ಎಷ್ಟೊಂದು ಉಪ ಪ್ರಶ್ನೆಗಳು ಶಿವರಾಂರವರೇ, ದಯಮಾಡಿ ಕುಳಿತುಕೊಳ್ಳಿ. ಸ್ಪೆಷಿಫಿಕ್ಕಾಗಿ ಕೊಟ್ಟರೆ ಅಥವಾ ಹೇಳಿದರೆ ತನಿಖೆ ಮಾಡಿಸುತ್ತೇವೆಂದು ಹೇಳಿದ್ದಾರಲ್ಲವೇ?

**ಶ್ರೀ ಬಿ. ಶಿವರಾಂ :** ಎಷ್ಟು ದಿವಸದಲ್ಲಿ ಎನ್‌ಕ್ವಯರಿ ಮಾಡಿಸುತ್ತೀರಿ ಎಂಬುದನ್ನು ಹೇಳಬೇಕು.

**ಶ್ರೀ ಗೋವಿಂದ ಎಂ. ಕಾರಜೋಳ :** ಎಷ್ಟು ದಿವಸದಲ್ಲಿ ಎಂದರೆ, ಅದು ಪ್ರೊಸೀಜರ್ ಪ್ರಕಾರ ಆಗಬೇಕಾಗುತ್ತದೆ.

**ಶ್ರೀ ಬಿ. ಶಿವರಾಂ :** ಟೈಮ್ ಆಗಲಿ ಪರವಾಗಿಲ್ಲ, ಎನ್‌ಕ್ವಯರಿ ಮಾಡಿಸಿ.

**ಶ್ರೀ ಗೋವಿಂದ ಎಂ. ಕಾರಜೋಳ :** ಮಾಡಿಸುತ್ತೇನೆ.

**ಶ್ರೀ ಬಿ. ಶಿವರಾಂ :** ಎಷ್ಟು ದಿವಸದಲ್ಲಿ ಮಾಡಿಸುತ್ತೀರಿ ಎನ್ನುವುದನ್ನು ಹೇಳಿ ಸಾಕು.

**ಶ್ರೀ ಗೋವಿಂದ ಎಂ. ಕಾರಜೋಳ :** ಎಷ್ಟು ದಿವಸ ಎಂದು ಹೇಳ ಬೇಕಾಗಿಲ್ಲ, ಹೌಸ್‌ನಲ್ಲಿ ಈಗಲೇ ಆರ್ಡರ್ ಮಾಡುವುದಕ್ಕಾಗುತ್ತದೆಯೇ? ನಾನು ಹೇಳುವುದೇನೆಂದರೆ, ಅದಕ್ಕೊಂದು ಪ್ರೊಸೀಜರ್ ಇದೆ. ನಿಯಮಾವಳಿಗಳ ಪ್ರಕಾರ ಎನ್‌ಕ್ವಯರಿ ಮಾಡಿಸುತ್ತೇವೆ. ನೀವು ಹಾಸನ ಜಗಳ ತಂದು ಈ ಹೌಸ್‌ನಲ್ಲಿ ಹಾಕಿದರೆ ಹೇಗಾಗುತ್ತದೆ?

**ಶ್ರೀ ಬಿ. ಶಿವರಾಂ** : ಜಗಳ ಅಲ್ಲ, ನಾನು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮಾತನಾಡುತ್ತಿದ್ದೇನೆ.

**ಶ್ರೀ ಗೋವಿಂದ ಎಂ. ಕಾರಜೋಳ** : ಆಯಿತು, ಗೊತ್ತಾಯಿತು.

**ಶ್ರೀ ಬಿ. ಶಿವರಾಂ** : ನಾನು ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಮಾತನಾಡುತ್ತಿದ್ದರೆ, ಹಾಸನ ಜಿಲ್ಲೆಯ ರಾಜಕೀಯ ಎಂದು ಹೇಳುತ್ತಿದ್ದಾರೆ.

**ಅಧ್ಯಕ್ಷರು** : ಆಯಿತು ಮಾಡುತ್ತೇನೆಂದು ಹೇಳುತ್ತಿದ್ದಾರೆ.

**ಶ್ರೀ ಎಂ ಮಲ್ಲಿಕಾರ್ಜುನ ಖರ್ಗೆ** : ಅವರಿಗೂ ಗೊತ್ತಾಗಿದೆ, ಹಾಸನ ಬಗ್ಗೆ ಅವರಿಗೂ ಕರೆಕ್ಟಾಗಿ ಗೊತ್ತಾಗಿದೆ. ಅಟ್‌ಲೀಸ್ಟ್ ಯಡಿಯೂರಪ್ಪನವರಿಗೆ ಮುಂದೆ ಏನು ಎನ್ನುವುದು ಗೊತ್ತಾಗುತ್ತದೆ.

**ಶ್ರೀ ಬಿ. ಶಿವರಾಂ** : ಅಲ್ಲಿ ಯಾರಿಗೋ ಒಬ್ಬರಿಗೆ ವೈಯಕ್ತಿಕವಾಗಿ ಆಸಕ್ತಿ ಇದೆ ಎಂದು ಒಬ್ಬರಿಗೆ ಟೆಂಡರ್ ಮಾಡಿಕೊಂಡು ಹೋಗಿ, ಅವನು ಏನು ಸಪ್ಲೈ ಮಾಡಿದರೂ ನಾವು ಒಪ್ಪಿಕೊಂಡು ಕೆಲಸ ಮಾಡಿಸಿಕೊಳ್ಳಬೇಕೆಂದು ಹೇಳಿದರೆ ಹೇಗೆ?

**ಶ್ರೀ ಗೋವಿಂದ ಎಂ. ಕಾರಜೋಳ** : ಈ ಮೊದಲು ಖರ್ಗೆ ಸಾಹೇಬರ ಸರ್ಕಾರ ಇತ್ತು. ನಿಯಮಾವಳಿ ಪ್ರಕಾರ ಅವರು ಸಪ್ಲೈ ಮಾಡಿದ್ದಾರೆ. ಯಾರು ಎಲಿಜಿಬಲ್ ಇರುತ್ತಾರೆ, ಅಂತಹವರಿಗೆ ಇದನ್ನು ಕೊಡಬೇಕಾಗುತ್ತದೆ. ಅಲ್ಲಿ ಇವರೇ ಕೆಲಸವನ್ನು ಮಾಡಬೇಕಾಗುತ್ತದೆ. ತಾವು ಆರೋಪವನ್ನು ಮಾಡುವಂತಹ ಸಂದರ್ಭದಲ್ಲಿ ಮಾನ್ಯ ಧರ್ಮಸಿಂಗ್‌ರವರು ಮುಖ್ಯಮಂತ್ರಿಗಳಾಗಿದ್ದರು.

**ಅಧ್ಯಕ್ಷರು** : ಮಾನ್ಯ ಶಿವರಾಮುರವರೆ, ಈ ಕಡೆ ಕುಳಿತಾಗಲೆಲ್ಲಾ ಬಹಳಷ್ಟು ಅವ್ಯವಹಾರ ಅದು, ಇದು ಈ ಕಡೆಗೆ ಬಂದಾಗಲೆಲ್ಲಾ ಇದೆ. ಅದರ ಬಗ್ಗೆ ಲಿಖಿತವಾಗಿ ಸ್ಪಷ್ಟವಾಗಿ ವಿಚಾರಣೆ ಮಾಡಿ ಎಂದು ಹೇಳಬೇಕು. ಇವೆಲ್ಲವು ನಡೆದು ಬಂದಿದೆ.

**ಶ್ರೀ ಎಂ.ಟಿ. ಕೃಷ್ಣಪ್ಪ** : ಹೋದ ಸಾರಿ ಅವರೇ ಸಚಿವರಾಗಿದ್ದರು.

**(ಅಡಚಣೆ)**

**ಅಧ್ಯಕ್ಷರು** : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**(ಅಡಚಣೆ)**

**ಅಧ್ಯಕ್ಷರು** : ದಯವಿಟ್ಟು ತಾವು ಕೇಳಿ. ಇದರಲ್ಲಿ ರಾಜಕೀಯ ಏನಿದೆ? ದಯಮಾಡಿ ಮಾನ್ಯ ಮಂತ್ರಿಗಳೇ, ಏನೆಂದರೆ ಕುಡಿಯುವ ನೀರಿನ ಪ್ರಶ್ನೆ ಇದೆ, ಶಿವರಾಮುರವರು ಯಾವ ವಿಚಾರ ಎತ್ತಿದ್ದಾರೋ ಏನೋ ಗೊತ್ತಿಲ್ಲ. ಆದರೆ ಏನಾಗಿದೆ ಎಂದರೆ, ಕಳಪೆ ಮಟ್ಟದ ವಸ್ತುಗಳನ್ನು ಅಂದರೆ ಪಿವಿಸಿ ಪೈಪ್ ಸಪ್ಲೈ ಮಾಡುತ್ತಾರಲ್ಲಾ, ಇದರ ಬಗ್ಗೆ ಸಾರ್ವಜನಿಕವಾಗಿ ಎಲ್ಲರೂ ಮಾತನಾಡುತ್ತಾರೆ. ಅದರ ಬಗ್ಗೆ ತಾವು ಹೊಸದಾಗಿ ಬಂದಿದ್ದೀರಿ. ನಿಮ್ಮ ಅಧಿಕಾರಿಗಳು ಏನು

ಮಾಡುತ್ತಿದ್ದಾರೆ? ಇಷ್ಟು ಕಮೀಷನ್ ಅಷ್ಟು ಕಮೀಷನ್ ಎಂದು ಅದು ಸಾರ್ವತ್ರಿಕ ವಿಚಾರ ಆಗಿದೆ. ಅದರಲ್ಲಿ ಕಳಪೆ ಮಟ್ಟದ ವಸ್ತುಗಳನ್ನು ಖರೀದಿ ಮಾಡಿ ಹಂಚುತ್ತಿದ್ದರೆ ಅದನ್ನು ತಾವು ನೋಡಬೇಕು. ಅದನ್ನು ಗಂಭೀರವಾಗಿ ತೆಗೆದುಕೊಳ್ಳಬೇಕು. ನೀವು ಹೊಸಬರು ಬಂದಿದ್ದೀರಿ. ಇದು ಹಿಂದೆ ಆ ತರಹ ಆಗಿತ್ತು ಎನ್ನುವಂತಹ ಪ್ರಶ್ನೆಯಲ್ಲ. ಅದು ನಿಮ್ಮ ಕಾಲದಲ್ಲೂ ಆಗಬಾರದು. ಏನಾದರೂ ಆ ರೀತಿಯಾಗಿದ್ದರೆ ಅದನ್ನು ಸರಿಪಡಿಸುವಂತಹ ಕ್ರಮವನ್ನು ತಾವು ತೆಗೆದುಕೊಳ್ಳಬೇಕು.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಮಾನ್ಯ ಅಧ್ಯಕ್ಷರೆ, ಮಾನ್ಯ ಕಾರಜೋಳರವರು, ಈಗ ಅವರು ಆ ಖಾತೆಯ ಮಂತ್ರಿಗಳಲ್ಲ. ಅವರು ಎಲ್ಲವನ್ನೂ ಹೇಳಿಬಿಟ್ಟರೆ ನಾವು ಹೇಗೆ ಕೇಳುತ್ತಾ ಕುಳಿತುಕೊಳ್ಳುವುದು?

**ಅಧ್ಯಕ್ಷರು** : ಅವರು ಮಂತ್ರಿಗಳಾಗಿದ್ದಾರೆ.

**ಶ್ರೀ ಜೆ.ಸಿ. ಮಾಧುಸ್ವಾಮಿ** : ಇದು ಶಾಸನ ಸಭೆ. ಮಾನ್ಯ ರವೀಂದ್ರನಾಥ್‌ರವರು ಸಂಬಂಧಪಟ್ಟ ಮಂತ್ರಿಗಳು. ಮಾನ್ಯ ಕಾರಜೋಳ್‌ರವರು ಆ್ಯಕ್ಷನ್ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದಾರೆ. ಈ ಸದನದಲ್ಲಿ ಏನು ನಡೆಯುತ್ತಿದೆ?

**ಅಧ್ಯಕ್ಷರು** : ಮಂತ್ರಿಗಳು ಅವರಲ್ಲವೇ?

**ಶ್ರೀ ಜೆ.ಸಿ. ಮಾಧುಸ್ವಾಮಿ** : ಅಲ್ಲಾ ಸಾರ್. ಮಾನ್ಯ ರವೀಂದ್ರನಾಥ್‌ರವರು ಮಂತ್ರಿಗಳು.

**ಶ್ರೀ ವಾಟಾಳ್ ನಾಗರಾಜ್** : ಮಾನ್ಯ ಅಧ್ಯಕ್ಷರೆ, ಅದು ನಿಮಗೂ ಕೂಡ ಗೊತ್ತಾಗಲಿಲ್ಲವೇ? ಏನು ಹಣೆಬರಹ ಇದು, ಈ ಸದನ ಯಾವ ದಿಕ್ಕಿಗೆ ಹೋಗುತ್ತಿದೆ?

**ಶ್ರೀ ಜೆ.ಸಿ. ಮಾಧುಸ್ವಾಮಿ** : ಒಂದು ನಿಮಿಷ ಕಾರಜೋಳರವರೆ, ಇಲ್ಲದೆ ಹೋದರೆ ಕಾರಜೋಳರವರನ್ನೇ ಬದಲಾಯಿಸಿ, ಇಲ್ಲಾ ಸಂಬಂಧಪಟ್ಟಂತಹ ಮಂತ್ರಿಗಳಿಗೆ ತಾವು ಹೇಳಬೇಕು.

**ಅಧ್ಯಕ್ಷರು** : ಆಯಿತು. ಯಾರೇ ಆಗಲಿ, ಅವರೋ ಅಥವಾ ಇವರೋ ಸಂಬಂಧಪಟ್ಟ ಮಂತ್ರಿಗಳು ಅಮೂಲಾಗ್ರವಾಗಿ ಇದರ ಬಗ್ಗೆ ಕ್ರಮ ತೆಗೆದುಕೊಳ್ಳಲಿ.

**ಶ್ರೀ ವಾಟಾಳ್ ನಾಗರಾಜ್** : ಅವರೋ ಅಥವಾ ಇವರೋ ಎನ್ನುವ ಪ್ರಶ್ನೆಯಲ್ಲ.

**ಅಧ್ಯಕ್ಷರು** : ಇದರ ಬಗ್ಗೆ ಅಮೂಲಾಗ್ರವಾಗಿ ತನಿಖೆ ಮಾಡಿಸಿ ಸರಿ ಮಾಡಿಸುವಂತಹ ಕೆಲಸವನ್ನು ಮಾಡಬೇಕು. ಈಗ ಲಿಖಿತ ಮೂಲಕ ಉತ್ತರಿಸುವಂತಹ ಪ್ರಶ್ನೆಗಳು.

**ಶ್ರೀ ಬಿ. ಶಿವರಾಂ** : ಮಾನ್ಯ ಸಚಿವರು ಇದರ ಬಗ್ಗೆ ಸ್ಪಷ್ಟ ಮಾಡಲೇ ಇಲ್ಲ.

**ಅಧ್ಯಕ್ಷರು** : ಅವರು ಮಂತ್ರಿಯೇ ಅಲ್ಲ.

**ಶ್ರೀ ಬಿ. ಶಿವರಾಂ** : ಅವರು ಮಂತ್ರಿ ಅಲ್ಲವೆಂದರೆ ಮೇಲೆ ಏತಕ್ಕೆ ಉತ್ತರವನ್ನು ಕೊಟ್ಟರು?

**ಅಧ್ಯಕ್ಷರು** : ಆಯಿತು. ಮಾನ್ಯ ಶಿವರಾಂರವರೇ, ತಾವು ಕುಳಿತುಕೊಳ್ಳಿ. ಈಗಾಗಲೇ 12 ಗಂಟೆಯಾಯಿತು.

**ಶ್ರೀ ಬಿ. ಶಿವರಾಂ** : ನಾವು ಕೇಳಿದ್ದಕ್ಕೆ ಯಾರೂ ಖಚಿತವಾಗಿ ಉತ್ತರವನ್ನು ಕೊಡಲಿಲ್ಲ.

**ಅಧ್ಯಕ್ಷರು** : ನಾನು ನಿಮ್ಮ ಪರವಾಗಿ ಹೇಳಿದೆ. ಏನೇನು ನಡೆಯುತ್ತಿದೆ ಎಂಬುದರ ಬಗ್ಗೆ ನಾನು ನಿಮ್ಮ ಪರವಾಗಿಯೇ ಹೇಳಿದೆ. ಅದೇನೆಂದರೆ ಅಮೂಲಾಗ್ರವಾಗಿ ಎಲ್ಲಾ ವಿಚಾರಣೆ ಮಾಡಿ ಎಂದು ನಾನು ಹೇಳಿದ್ದೇನೆ.

**ಶ್ರೀ ಬಿ. ಶಿವರಾಂ** : ಅವರು ಮಾಡುತ್ತೇವೆಂದು ಹೇಳಲಿಲ್ಲವಲ್ಲಾ?

**ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ** : ಮಾನ್ಯ ಅಧ್ಯಕ್ಷರೆ, ಮೊದಲೇ ಕನ್‌ಫ್ಯೂಷನ್ ಆಗಿದೆ. ಏನೆಂದರೆ ಮಾನ್ಯ ಸಚಿವರು ಉತ್ತರವೇನು ಕೊಟ್ಟಿದ್ದಾರೆ. ಅವರಿಗೆ ಇದರ ಬಗ್ಗೆ ಮಾಹಿತಿ ಇತ್ತು ಎಂದು ಉತ್ತರವನ್ನು ಕೊಟ್ಟಿದ್ದಾರೆ. ಆದರೆ ನಿಜವಾಗಲೂ ಆ ಫೈಲ್ ಮೇಲೆ ಆರ್ಡರ್ ಮಾಡುವುದಕ್ಕೆ ಅವರಿಗೆ ಬರುವುದಿಲ್ಲ. ಇದನ್ನು ಯಾರು ಮಾಡಬೇಕು? ಮಾನ್ಯ ಸಚಿವರಾದ ಶ್ರೀ ರವೀಂದ್ರನಾಥ್‌ರವರು ಮಾಡಬೇಕು. ಅದಕ್ಕೆ ಅವರು ಇದನ್ನು ಹೇಳಿದ್ದರೆ ಇದು ಕನ್‌ಫರ್ಮ್ ಆಗುತ್ತದೆ. ತಾವು ಹೇಳಿದ್ದು ತಪ್ಪು ಎಂದು ಹೇಳುವುದಿಲ್ಲ. ಅವರು ಎಕ್ಸ್‌ಪ್ಲೇನ್ ಮಾಡಿದ್ದು, ಏಕೆಂದರೆ because earlier he was holding that portfolio, he knows and he knows in depth the department also. ಅದಕ್ಕೆ ಕನಿಷ್ಠ ಇದರ ಬಗ್ಗೆ ಯಾರಿಗೆ ಸಂಬಂಧವಿದೆ, ಅವರು ಇದನ್ನು ಮಾಡುತ್ತೇನೆ ಎಂದು ಹೇಳಿದರೆ ಇದು ಮುಕ್ತಾಯವಾಗುತ್ತದೆ.

**ಅಧ್ಯಕ್ಷರು** : ಮಾನ್ಯ ರವೀಂದ್ರನಾಥ್‌ರವರೆ, ತಾವು ಇದರ ಬಗ್ಗೆ ನಾನು ತನಿಖೆ ಮಾಡಿಸುತ್ತೇನೆಂದು ಹೇಳಿ.

**ಶ್ರೀ ಎಸ್.ಎ. ರವೀಂದ್ರನಾಥ್** : ತನಿಖೆ ಮಾಡಿಸುತ್ತೇನೆ.

**ಒಬ್ಬ ಮಾನ್ಯ ಸದಸ್ಯರು** : ಹಿಂದಿನ ಮಂತ್ರಿಗಳು ಅದನ್ನೆಲ್ಲವನ್ನೂ ಒದಗಿಸಬೇಕಲ್ಲವೇ?

**ಅಧ್ಯಕ್ಷರು** : ಹೌದು ಸ್ವಾಮಿ, ಇದರ ಬಗ್ಗೆ ತನಿಖೆಯನ್ನು ಮಾಡಿಸಬೇಕಲ್ಲವೇ? ಅವರ ಬೇಡಿಕೆಯೂ ಅದೇ ಅಲ್ಲವೇ.

**ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ** : ಮಾನ್ಯ ಅಧ್ಯಕ್ಷರೆ, ನಾನು ಶೂನ್ಯ ವೇಳೆಯಲ್ಲಿ ಪ್ರಸ್ತಾಪ ಮಾಡುವ ಬಗ್ಗೆ ಒಂದು ವಿಷಯವನ್ನು ಕೊಟ್ಟಿದ್ದೆ.

**ಅಧ್ಯಕ್ಷರು** : ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

**(ಆ) ಚುಕ್ಕೆ ಗುರ್ತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.**

**ಶ್ರೀ ಬಿ.ಎಸ್. ಯಡಿಯೂರಪ್ಪ (ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ಹಣಕಾಸಿನ ಸಚಿವರು)** : ಮಾನ್ಯ ಅಧ್ಯಕ್ಷರೆ, ಗುರುವಾರ ದಿನಾಂಕ: 29ನೇ ಜೂನ್ 2006ರಂದು 12ನೇ ಪಟ್ಟಿಯ ಲಿಖಿತ ಮೂಲಕ ಉತ್ತರಿಸುವ 38 ಪ್ರಶ್ನೆಗಳ ಪೈಕಿ 35 ಉತ್ತರಗಳನ್ನು ಮತ್ತು